ಉಪಾಯ ಕಂಡುಹಿಡಿದ್ರು...' ಅಂದ ದೊಡ್ಡ ಸ್ವರದಲ್ಲಿ. ದಾಪುಗಾಲಲ್ಲಿ ಪ್ರಧಾನಬಾಗಿಲಿಂದ ಜಗುಲಿಗೆ ಬಂದ ಜಲಜವ್ವ ಸತ್ಯಣ್ಣನ ಸುದ್ದಿಯನ್ನು ಅಲಕ್ಷಿಸಿ 'ವಸುಧಾಗೆ ನೋವು ಸುರುವಾಗಿದೆ. ಲಗೂನೆ ಸಿದ್ದಮ್ಮನ ಕರಕೋ ಬರ್ರಿ..' ಆತುರದಲ್ಲಿ ಹೇಳಿದಳು. 'ಹೌದೇನು?' ಅಂತ ಪತ್ರಿಕೆಯನ್ನು ಇದ್ದಲ್ಲೇ ಬಿಟ್ಟು ತಟ್ಟನೆ ಎದ್ದ ಸತ್ಯಣ್ಣ ಹೆಗಲಮೇಲೆ ಟವೆಲು ಹಾಕಿಕೊಳ್ಳುವುದನ್ನೂ ಮರೆತು ರಸ್ತೆಗೆ ಧಾವಿಸಿದ.

ಜೀವಮಾನದಲ್ಲಿ ನೂರಾರು ಹೆರಿಗೆ ಮಾಡಿಸಿದ್ದ ಸಿದ್ದಮ್ಮನ ಮನೆ ಪಕ್ಕದ ಓಣಿಯಲ್ಲೇ ಇತ್ತು. ರಾತ್ರಿ ಮಳೆಗೆ ಕೆಸರಾದ ರಸ್ತೆಯಲ್ಲಿ ಶಕ್ತಿ ಮೀರಿ ಧಾವಿಸಿ ಬಂದ ಇಳಿ ವಯಸ್ಸಿನ ಸಿದ್ದಮ್ಮ ಬಂದವಳೆ 'ನೀರು ಕುದಿಸಲಿಕ್ಕಿಟ್ಟಿದಿರೇನು...?' ಅಂತ ಅವಸರಿಸಿ ಬೆಂಕಿಯಲ್ಲಿ ಕಾಸಿ ನಂಜುತೆಗೆದ ಚೂರಿ, ಹಳೆವಸ್ತ್ರ ಚಕಚಕನೆ ಸಿದ್ಧ ಮಾಡಿಕೊಂಡು ಹೆರಿಗೆ ಕೋಣೆಯ ಬಾಗಿಲೆರೆಸಿಕೊಂಡಳು. ಮುಕ್ಕಾಲು ತಾಸು ಹೊರಗಿದ್ದವರನ್ನು ಆತಂಕದಲ್ಲಿ ಕಾಯಿಸಿದ ವಸುಧಾಳ ನರಳುವಿಕೆ ಮೀರಿ ಕೂಸಿನ ಅಳುವ ಸ್ವರ ಒಳಗಿಂದ ಕೇಳಿಸಿತು. 'ತಾಯೀನ ಅರೆಜೀವ ಮಾಡಿಬಿಟ್ಟ ನಿಮ್ಮ ಮೊಮ್ಮಗ. ಏನು ಮಾಡಿದ್ರೂ ಹೊರಬರಲ್ಲ ಅಂತಾನೆ. ಕಾಲು ಮುಂದಾಗಿ ಹುಟ್ಟಿದಾನಪ್ಪಾ! ನಾನು ಮಾಡ್ಸಿದ ಹೆರಿಗೇಲಿ ಇದು ಎರಡ್ನೇದು...' ಉದ್ಗರಿಸಿದಳು ಸಿದ್ದಮ್ಮ. ಹೆರಿಗೆಯಲ್ಲಿ ಕಷ್ಟವಾದರೂ ಮಗು ಬಾಳಂತಿ ಸುರಕ್ಷಿತವಾಗಿದ್ದುದು ಸತ್ಯಣ್ಣನಿಗೆ ನೆಮ್ಮದಿಯಾಗಿತ್ತು. ಕೇದಾರ ತಕ್ಷಣ ಸಿದ್ಧರಿಗೆ ತಿಳಿಸಬೇಕು ಅನ್ನಿಸಿ ಹೊರಟ.



ಹಳ್ಳಕ್ಕೆ ಹೋಗುವ ದಾರಿಯ ದಿಬ್ಬ ಹತ್ತುತ್ತಿದ್ದಂತೆ ಅರಳೀಕಟ್ಟೆಯಮೇಲೆ ಕುಳಿತು ಬಾಳೇಹಣ್ಣಿನ ಫಲಾಹಾರ ಸೇವಿಸುತ್ತಿದ್ದ ಸಿದ್ಧರು ಕಾಣಿಸಿದರು. ಕೇದಾರನಂತಾ ಊರಿನ ಕೆಲವರು ಸಿದ್ಧರಿಗೆ ತಿಳಿಸದೇ ಏನೂ ಮಾಡುತ್ತಿರಲಿಲ್ಲ. ಅಡ್ಡಬಿದ್ದ ಕೇದಾರ ಮಗು ಜನಿಸಿದ ಸುದ್ದಿ ಬಿನ್ನವಿಸಿ ಆಶೀರ್ವಾದ ಬೇಡಿದ. ಪಕ್ಕದ ದೇವಿಗುಡಿಯ ಪೀಠದ ಹತ್ತಿರ ಕುಳಿತು ತಮ್ಮ ಓಲೆಗರಿಗಳನ್ನು ಸ್ವಲ್ಪಹೊತ್ತು ಪರಿಶೀಲಿಸುತ್ತ ಲೆಕ್ಕ ಹಾಕುತ್ತಿದ್ದ ಸಿದ್ಧರ ಹಣೆಯಮೇಲೆ ನೆರಿಗೆ ಮೂಡಿತು. ನಿಟ್ಟುಸಿರು ಬಿಟ್ಟವರು, 'ಅಮಾವಾಸ್ಯೆ ಇವತ್ತು, ಕ್ರೂರ ನಕ್ಷತ್ರವೂ ಜೊತೆಗೂಡಿದೆ. ಮೇಲಿಂದ ಶಿಶು ಕಾಲು ಮುಂದಾಗಿ ಹುಟ್ಟಿದೆ ಅಂತೀರಿ. ರಾಕ್ಷಸ ಜನ್ಮ ಇದು! ಮನೆ ನಾಶವಾಗಿ ಹೋಗುತ್ತಪ್ಪಾ!' ಸಿದ್ಧರ ಮಾತು ಕೇಳಿ ಕಾಲಡಿಯ ಭೂಮಿ ಬಾಯ್ಬಿಟ್ಟಂತಾಗಿ 'ಹೀಗಂದ್ರೆ ಹೇಗೆ ಸ್ವಾಮಿ?' ಅಂದ ನಡುಗುವ ಸ್ವರದಲ್ಲಿ. ಮತ್ತೊಮ್ಮೆ ಓಲೆಗರಿಯನ್ನು ಪರಿಶೀಲಿಸಿದ ಸಿದ್ಧರು ತಲೆಯಲ್ಲಾಡಿಸಿ, 'ಅಷ್ಟೇ! ಶಾಪವೆ ಹುಟ್ಟಿದೆ!' ಅಂದರು ಕೊನೆಯ ಮಾತು ಎಂಬಂತೆ. ಸಂತೋಷ ಹಂಚಿಕೊಳ್ಳಲು ಬಂದ ಕೇದಾರನಿಗೆ ಮೈಮೇಲೆ ಕುದಿನೀರು ಸುರುವಿದಂತಾಗಿತ್ತು. ಹಿಮಾಲಯದಲ್ಲಿ ತಪಸ್ಸು ಮಾಡಿದವರು ಎಂಬ ಪ್ರತೀತಿಯಿರುವ ಸಿದ್ಧರು. ಕೇದಾರನೂ ಸೇರಿ ಊರ ಕೆಲವರು ವರ್ಷಗಳಿಂದ ದೇವರ ಹತ್ತಿರ ನಡೆದುಕೊಳ್ಳುವಂತೆ ನಡೆದುಕೊಳ್ಳುತ್ತಾರೆ. 'ಇದಕ್ಕೆ ಏನಾದರೂ ಪರಿಹಾರವಿಲ್ವ ಸ್ವಾಮಿ?' ಕೇಳಿದ ಆರ್ತನಾಗಿ. ಒಂದುಕ್ಷಣ ಏನೋ ಧ್ಯಾನಿಸಿದವರು, 'ಮಗುವನ್ನು ಯಾರಿಗಾದರೂ ಕೊಟ್ಟುಬಿಡು; ಕುಟುಂಬದ ಹೊರಗಿನವರಾಗಿರಬೇಕು. ಅದೊಂದೇ ಪರಿಹಾರ...' ಅಂದರು. ಮನೆಗೆ ಬಂದ ಕೇದಾರ ಹೇಳಿದ ಮಾತು ಎಲ್ಲರಿಗೂ ವಿಷ ಕುಡಿದಂತಿತ್ತು. ಯಾರೂ ಒಪ್ಪುವಂತದ್ದಾಗಿರಲಿಲ್ಲ. ನಿರ್ಧರಿಸಲಾಗದೆ ದಿನ ಕಳೆಯುತ್ತಿತ್ತು. ಸ್ವಾತಂತ್ರ್ಯ ಚಳವಳಿಯಲ್ಲಿ ಹಲವುಕಡೆ ಸುತ್ತಿದ್ದ ಸತ್ಯಣ್ಣ 'ಬುದ್ಧಿಯಿದೆಯೇನು ನಿಮಗೆ? ಕ್ರೂರ ನಕ್ಷತ್ರವು ಇಲ್ಲ; ಸಾಧು ನಕ್ಷತ್ರವೂ ಇಲ್ಲ! ತೆಪ್ಪಗೆ ಮಗು ಬಾಳಂತಿ ದೇಖರೇಖೆ ನೋಡಿ...' ಗದರಿಸಿದ. ಎಂಟುದಿನವಾಗಿತ್ತು, ಹೂಡುವ ಎತ್ತು ಗದ್ದೆಯ ಹುಣಿಯಿಂದ ತಗ್ಗಿಗೆ ಜಾರಿಬಿದ್ದು ಕಾಲು ಮುರಿದುಕೊಂಡಿತು. ಎಲ್ಲರಿಗೂ ಆತಂಕವಾಯಿತು. ಮಳೆಯಿಂದ ಏರಿ ಸಡಿಲವಾಗಿದೆ ಅನ್ನುವುದು ಕಂಡರೂ ಧೈರ್ಯವಾಗುತ್ತಿಲ್ಲ. ಸಿದ್ಧರಿಗೆ ನಡಕೊಳ್ಳೋ ಪೈಕಿ ಕೇದಾರನ ಆಪ್ತಮಿತ್ರರಿದ್ದರು. ಮೇಲಿಂದ ಸುದ್ದಿ